ಓ.ಎಸ್. ನಂ. 126/2014

ಡಿ.ಡಬ್ಲ್ಯು: 02 (ಚನ್ನಬಸಪ್ಪ)

ದಿನಾಂಕಃ 23.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 5 ಎ, 6 – 14 ನೇ ಪ್ರತಿವಾದಿ ಪರ – ಶ್ರೀ ಡಿ ಬಿ ಆರ್ ವಕೀಲರಿಂದ.

ಮರಣ ಶಾಸನ ಬರೆದವರು ನನಗೆ 34 ವರ್ಷದಿಂದ ಗೊತ್ತು. 1 ನೇ ಪ್ರತಿವಾದಿಯ ತಂದೆ ನನಗೆ ಆತ್ಮೀಯರು ಎಂದರೆ ಇಲ್ಲ. ಅವರು ಕೊಟ್ಟೂರಿನಲ್ಲಿ ವಾಸವಾಗಿದ್ದರು. ನಾನು ಕೊಟ್ಟೂರಿನಲ್ಲಿ ವಾಸವಾಗಿದ್ದು, ಕೂಡ್ಲಿಗಿಯಲ್ಲಿ ವಕೀಲ ವೃತ್ತಿ ಮಾಡುತ್ತಿದ್ದೆ. ಮೃತ ಶಿವಬಸಪ್ಪ ಅವರಿಗೆ ಎಷ್ಟು ಜನ ಒಡಹುಟ್ಟಿದವರು ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ತಂದೆ ಎಲೆಕ್ಟ್ರಿಷನ್ ಆದ ಕಾರಣ ನನಗೆ ಪರಿಚಯ ಇರುತ್ತಾರೆ. ಅವರು ವ್ಯವಸಾಯ ಮಾಡಿದ್ದರೆ ಎಂದು ನನಗೆ ಗೊತ್ತಿಲ್ಲ. ಒಟ್ಟು ಕುಟುಂಬದ ಆಸ್ತಿಯನ್ನು ಯಾರು ವ್ಯವಸಾಯ ಮಾಡುತ್ತಿದ್ದರು ಎಂದು ನಾನು ತಿಳಿದುಕೊಂಡಿಲ್ಲ.

ಮರಣ ಶಾಸನ ಬರೆಯುವಾಗ ಎಲ್ಲ ವಿಚಾರ ತಿಳಿದುಕೊಂಡೆ ಬರೆಯುತ್ತಾರೆ ಎಂದರೆ ಹೌದು. ಮರಣ ಶಾಸನ ಬರೆದವರ ಒಡಹುಟ್ಟಿದವರ ಬಗ್ಗೆ ತಿಳಿದುಕೊಂಡು ಬರೆಯುತ್ತೇವೆ ಎಂದರೆ ಅದಕ್ಕೂ ಮರಣ ಶಾಸನಕ್ಕೂ ಸಂಬಂಧ ಇಲ್ಲ. ಯಾವ ಆಧಾರದ ಮೇರೆಗೆ ಮರಣ ಶಾಸನವನ್ನು ಬರೆದಿರುತ್ತೇನೆ ಎಂದರೆ ಪಕ್ಷಗಾರರ ಹೇಳಿಕೆಯ ಮೇಲೆ ಬರೆದಿರುತ್ತೇನೆ. ದಾಖಲೆಗಳನ್ನು ನೋಡಿದರೆ ಆಸ್ತಿಯ ಸ್ವರೂಪ ಗೊತ್ತಾಗುತ್ತಿತ್ತು ಎಂದರೆ ಹೌದು. ಶಿವಬಸಪ್ಪ ಹಾಗೂ ನಮ್ಮ ಮನೆಗೆ ಸ್ವಲ್ಪ ದೂರದಲ್ಲಿದೆ. ಶಿವಬಸಪ್ಪ ಹಾಗೂ ಗಂಗಮ್ಮ ಅವರ ಮನೆ ಎಷ್ಟು ದೂರದಲ್ಲಿದೆ ಎಂದು ನನಗೆ ಗೊತ್ತಿಲ್ಲ. ನಮ್ಮ ಮನೆ ಹಾಗೂ ಗಂಗಮ್ಮ ಅವರ ಮನೆ ಒಂದು ಫರ್ಲಾಂಗು ದೂರದಲ್ಲಿದೆ. ಗಂಗಮ್ಮ ಲಿಂಗಧಾರಣೆ ಮಾಡಿಕೊಂಡು ಪ್ರತ್ಯೇಕವಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರಿಬ್ಬರ ಮನೆ ದೂರ ಇದೆ ಎಂದು ನನಗೆ ಗೊತ್ತು. ನಾನು 1980-90 ರವರೆಗೆ ಕೊಟ್ಟೂರಿನಲ್ಲಿ ವಾಸವಾಗಿದ್ದೆ. ಅದಾದ ನಂತರ ನಾನು ಅಂಬಳಿ ಗ್ರಾಮದಲ್ಲಿ ವಾಸವಾಗಿದ್ದೆ. ಮರಣ ಶಾಸನ ಬರೆದವರ ಬಳಿ ಇತ್ತು. ಮರಣ ಶಾಸನ ಬರೆಯಬೇಕೆಂದು ಗಂಗಮ್ಮ ಬಂದು ಕೇಳಿದ್ದು, ಆಗ ಅವರಿಗೆ ಸುಮಾರು 80 ವರ್ಷ ಆಗಿತ್ತು. ಮರಣ ಶಾಸನ ಬರೆದ 4-5 ದಿನ ಮೊದಲು ನನ್ನ ಬಳಿ ಬಂದಿದ್ದರು. ನನ್ನ ಬಳಿ ಒಬ್ಬರೇ ಬಂದಿದ್ದರು. ಆಗ ಅವರು ಚೆನ್ನಾಗಿ ಓಡಾಡಿಕೊಂಡಿದ್ದರು. ಅವರು ಮಾನಸಿಕವಾಗಿ ಹಾಗೂ ದೈಹಿಕವಾಗಿ ಚೆನ್ನಾಗಿದ್ದರು.

ಆಗ ಅವರು ಏನು ದಾಖಲೆಗಳನ್ನು ನನಗೆ ಕೊಡಲಿಲ್ಲ. ನಾನು ಅವರಿಗೆ ದಾಖಲೆಗಳನ್ನು ತರಲು ಹೇಳಿದ್ದೆ, ಆದರೆ ಅವರು ನನಗೆ ಹೊಲ ಮತ್ತು ಮನೆ ಇದೆ ನಾನು ದಾಖಲೆಗಳನ್ನು ತರಲು ಎಲ್ಲಿ ಹೋಗಲಿ ನನಗೆ ವಯಸ್ಸಾಗಿದೆ ಎಂದು ಹೇಳಿದರು. ನಾನು ದಾಖಲೆಗಳನ್ನು ತೆಗೆಸಲು ಪ್ರಯತ್ನ ಮಾಡಲಿಲ್ಲ. ದಾಖಲೆಗಳಲ್ಲಿ ತಿದ್ದುಪಡಿ ಮಾಡಿದರೆ ಸಣ್ಣ ಸಹಿ ಹಾಕುತ್ತಾರೆ ಎಂದರೆ ಹೌದು. ದಾಖಲೆಗಳಲ್ಲಿ ಎಷ್ಟು ತಿದ್ದುಪಡಿಯಾಗಿದೆ ಎಂದರೆ ನಾನು ಹೇಗೆ ಹೇಳಲಿ, ನನಗೆ ನೆನಪಿಟ್ಟುಕೊಳ್ಳಲು ಆಗುವುದಿಲ್ಲ.

ಓ.ಎಸ್. ನಂ. 126/2014

ಡಿ.ಡಬ್ಲ್ಯು: 02 (ಚನ್ನಬಸಪ್ಪ)

ನಾನು ಮರಣ ಶಾಸನದ ಪ್ರತಿಯನ್ನು ಇಟ್ಟುಕೊಳ್ಳಬೇಕು ಎಂದರೆ ಹೌದು. ಆ ಪ್ರತಿ ನನ್ನ ಬಳಿ ಇದೆಯೇ ಎಂದರೆ ಇಲ್ಲ. ಸಾಕ್ಷಿದಾರರು ನೇರವಾಗಿ ಉಪನೊಂದಣಾಧಿಕಾರಿ ಕಚೇರಿಗೆ ಬಂದಿದ್ದರು. ಸಾಕ್ಷಿದಾರರ ವಿವರಗಳನ್ನು ನಾನೇನಾದರೂ ತಿಳಿದುಕೊಂಡೆನೇ ಎಂದರೆ ಕೊಟ್ಟೂರಿನವರು ಎಂದು ಗೊತ್ತಾಯಿತು. ಸಾಕ್ಷಿ ಮುಂದುವರೆದು ಅವರ ಹೆಸರು ಮತ್ತು ಅವರ ತಂದೆಯ ಹೆಸರನ್ನು ಸಾಕ್ಷಿದಾರರು ಹೇಳಿರುತ್ತಾರೆ. ಶಿವಬಸಪ್ಪ ಅವರ ಮನೆಯ ಗುರುಗಳು ನೀಲಕಂಠಯ್ಯ ಎಂದರೆ ನನಗೆ ಗೊತ್ತಿಲ್ಲ. ನೀಲಕಂಠಯ್ಯನವರು ಅದಕ್ಕೂ ಮೊದಲು ನನಗೆ ಗೊತ್ತಿರಲಿಲ್ಲ. ನಿಂಗಪ್ಪರವರು ಸಹ ಆ ದಿನವೇ ಪರಿಚಯ ಆಗಿರುತ್ತಾರೆ. ಅವರ ಜೊತೆ ಬೇರೆಯವರು ಬಂದಿರುವ ಬಗ್ಗೆ ನನಗೆ ಗೊತ್ತಿಲ್ಲ.

ಮರಣ ಶಾಸನವನ್ನು ಮನೆಯಲ್ಲಿಯೇ ತಯಾರು ಮಾಡಿದ್ದು, ಉಪನೊಂದಣಾಧಿಕಾರಿ ಕಚೇರಿಯಲ್ಲಿ ನೊಂದಣಿ ಮಾಡಿಸಿರುತ್ತೇವೆ. ನಾನು ಶಿವಬಸಪ್ಪ ಹಾಗೂ ಸಾಕ್ಷಿದಾರರು ಸೇರಿ ಮರಣ ಶಾಸನವನ್ನು ನೊಂದಣಿ ಮಾಡಿಸಿರುತ್ತೇವೆ ಎಂದರೆ ನಾನು ಆ ದಿನ ಶಿವಬಸಪ್ಪ ಅವರನ್ನು ನೋಡಿಯೇ ಇಲ್ಲ. ಗಂಗಮ್ಮಳಿಗೆ ವಯಸ್ಸಾದ ಕಾರಣ ಅವರಿಗೆ ದಿನನಿತ್ಯದ ಕೆಲಸ ಮಾಡಿಕೊಳ್ಳಲಾಗುತ್ತಿರಲಿಲ್ಲ, ಅವರಿಗೆ ಕಿವಿ ಸರಿಯಾಗಿ ಕೇಳುತ್ತಿರಲಿಲ್ಲ ಎಂದರೆ ಸರಿಯಲ್ಲ. ನೊಂದಣಿ ಮಾಡಿಸಿದ ನಂತರ ಗಂಗಮ್ಮಳಿಗೆ ಮರಣ ಶಾಸನ ಕೊಟ್ಟಿದ್ದೆ. ಮರಣ ಶಾಸನವನ್ನು ಅದಾದ ನಂತರ ದಾವೆ ಹೂಡಿದ ನಂತರ ನೋಡಿರುತ್ತೇನೆ. ನನಗೆ ಅದನ್ನು ಬೆರಳಚ್ಚು ಮಾಡಿಸಲು ತೊಂದರೆ ಇತ್ತಾ ಎಂದರೆ ನನಗೆ ಅವಕಾಶ ಇದ್ದ ಕಾರಣ ಕೈಯಲ್ಲಿ ಬರೆದಿರುತ್ತೇನೆ.

ನಾನು ಸದರಿ ದಾಖಲೆಯಲ್ಲಿ 3-4 ತಿದ್ದುಪಡಿ ಮಾಡಿರಬಹುದು, ಸಾಮಾನ್ಯವಾಗಿ ನಾನು ಬರೆದ ದಾಖಲೆಗಳಲ್ಲಿ ತಿದ್ದುಪಡಿ ಕಡಿಮೆ ಇರುತ್ತದೆ. ಸಾಕ್ಷಿ ಮುಂದುವರೆದು ನನಗೆ ನಿಖರವಾಗಿ ಜ್ಞಾಪಕವಿಲ್ಲ. ಕಾಟು ಹಾಕಿರುವ ಬಳಿ ಮರಣ ಶಾಸನದಲ್ಲಿ ಶಾಹಿ ಬದಲಾವಣೆಯಾಗಿದೆ ಎಂದರೆ ಇಲ್ಲ. ಕಾಟು ಹಾಕಿರುವ ಬಳಿ ನನ್ನ ಚಿಕ್ಕ ಸಹಿ ಕಾಣುತ್ತಿಲ್ಲ ಎಂದರೆ ಇದೆ. ಶಿವಬಸಪ್ಪ ಅವರು ನನಗೆ ಆತ್ಮೀಯರಾದ ಕಾರಣ ಅವರ ಮಗನಿಗೆ ಸಹಾಯ ಆಗುವ ರೀತಿಯಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ 1 ನೇ ಪ್ರತಿವಾದಿ ಸಾಕ್ಷಿ ನುಡಿಯಲು ಕರೆದಿರುತ್ತಾರೆ. ಗಂಗಮ್ಮಳಿಗೆ ಮಾನಸಿಕವಾಗಿ ಹಾಗೂ ದೈಹಿಕವಾಗಿ ಚೆನ್ನಾಗಿರಲಿಲ್ಲ, ಹೀಗಿದ್ದರು ಸಹ ನಾನು ಹಾಗೂ ಶಿವಬಸಪ್ಪ ಸೇರಿ ಮರಣ ಶಾಸನವನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ಕೂಡ್ಲಿಗಿ.